(iii) ಚೆನ್ನಗಿರಿ ತಾಲ್ಲೂಕಿನಲ್ಲಿ ಜೀತಪದ್ಧತಿಯಿಂದ ಬಿಡುಗಡೆ ಹೊಂದಿದವರಿಗೆ ಪುನರ್ವಸತಿ ಕಲ್ಪಿಸಿರುವುದು

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ಶಿವಮೊಗ್ಗ ಜಿಲ್ಲೆಯ ಚೆನ್ನಗಿರಿ ತಾಲ್ಲೂಕಿನಲ್ಲಿ ೧೯೭೫-೭೬ರಲ್ಲಿ ಜೀತ ಪದ್ಧತಿಯಿಂದ ಬಿಡುಗಡೆ ಹೊಂದಿದ ಸುಮಾರು ೩೦೦೦ ಜನಗಳ ಪೈಕಿ ಕೇವಲ ೯೧೨ ಜನರಿಗೆ ಪುನರ್ ವಸತಿ ಕಲ್ಪಿಸಿದೆ. ಕೇಂದ್ರ ಸರ್ಕಾರದ ಪಾಲಿನ ಹಣ ಬಿಡುಗಡೆ ಆಗಿ ೭-೮ ವರ್ಷಗಳು ಕಳೆದಿದ್ದು, ೩ ತಿಂಗಳ ಒಳಗಾಗಿ ಈ ಹಣ ವಿತರಣೆ ಆಗಬೇಕೆಂದು ಆದೇಶವಿದ್ದರೂ ದಿನಾಂಕ ೧೮-೧೨-೧೯೮೩ರಲ್ಲಿ ಸುಪ್ರೀಂ ಕೋರ್ಟ್ ಸಹಾ ಎಲ್ಲಾ ರಾಜ್ಯದ ಜೀತಪದ್ಧತಿಯ ವಿಮುಕ್ತ ಜನಗಳಿಗೆ ೩ ತಿಂಗಳೊಳಗಾಗಿ ಎಲ್ಲಾ ಸೌಲಭ್ಯ ಕೊಡಬೇಕೆಂದು ಆದೇಶ ನೀಡಿದೆ.

ಹೀಗಿದ್ದರೂ ಚನ್ನಗಿರಿ ತಾಲ್ಲೂಕಿನಲ್ಲಿ ಈ ಪುನರ್ ವಸತಿ ಸಮಯದಲ್ಲಿ ಭ್ರಷ್ಟಾಚಾರ ನಡೆದಿದೆ ಎಂದು ಸಿ.ಓ.ಡಿ. ತನಿಖೆಗೆ ಒಳಪಡಿಸಿ ವರ್ಷಗಳು ಉರುಳಿದರೂ ಉಳಿದ ೨೧೯೮ ಜನಗಳಿಗೆ ಪುನರ್ ವಸತಿ ಮಾಡಿಲ್ಲ. ಇದರ ಬಗ್ಗೆ ತನಿಖೆ ನಡೆಯುತ್ತಿರುವುದು ಈಗಾಗಲೇ ವಿತರಣೆ ಆಗಿರುವ ೯೧೨ ಜನದ ಬಗ್ಗೆ ಇದ್ದು ಉಳಿದ ೨೧೯೮ ಜನಕ್ಕೆ ತಕ್ಷಣ ಪುನರ್ ವಸತಿ ಕಲ್ಪಿಸಲು ಸರ್ಕಾರ ತುರ್ತು ಕ್ರಮ ಏನು ಕೈಗೊಂಡಿದೆ ಎಂಬ ಬಗ್ಗೆ ಸರ್ಕಾರದ ಹೇಳಿಕೆ ತಿಳಿಯಬಯಸುತ್ತೇನೆ.

ಶ್ರೀ ಬಿ. ಆರ್. ಯಾವಗಲ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಈ ರಾಜ್ಯದಲ್ಲಿ ಸುಮಾರು ಎರಡು ಸಾವಿರ ಮೇಲೆ ಜೀತ ವಿಮುಕ್ತರು ಇದ್ದಾರೆ ಎಂದು ಹೇಳಿದ್ದಾರೆ. ಎರಡು ಸಾವಿರದಲ್ಲಿ ಅವರನ್ನು ವಿಮುಕ್ತರನ್ನಾಗಿ ಮಾಡಿದ ಸಂಖ್ಯೆ ೧೨೫೭ ಎಂದು ಕೊಟ್ಟಿದ್ದಾರೆ. ಅವರು ಹೇಳಿದ ಹಾಗೆ ಈ ಕೆಲಸ ಸ್ವಲ್ಪ ನಿಧಾನವಾದದ್ದು ನಿಜ. ಕಾರಣ ಅಲ್ಲಿ ನಡೆದಂಥ ಅವ್ಯವಹಾರಗಳನ್ನು ಮತ್ತು ಅಕ್ರಮಗಳನ್ನು ಸಿ.ಓ.ಡಿ ತನಿಖೆಗೆ ಒಳಪಡಿಸಿದ್ದರಿಂದ ವರದಿ ಬರುವವರೆಗೂ ಕಾಯಲಾಗಿದೆ. ಇದರ ಬಗ್ಗೆ ಪ್ರಾಥಮಿಕ ವರದಿಯನ್ನು ಕೊಟ್ಟಿದ್ದಾರೆ. ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್‌ನ ತೀರ್ಮಾನಗಳು ಏನು ಇವೆ, ಇದರ ಆಡಿಯಲ್ಲಿ ಯಾರು ಯೋಗ್ಯರು, ಯಾರು ಅರ್ಹರು ಎಂದು ಪರಿಶೀಲಿಸಿ ಸರ್ವರಿಗೂ ಕೊಡಲಿಕ್ಕೆ ತೀರ್ಮಾನ ಕೈಗೊಂಡಿದೆ. ಇದಕ್ಕಾಗಿ ಹಣವನ್ನು ಸಹಾ ಬಿಡುಗಡೆ ಮಾಡಿದೆ ಎಂದು ತಿಳಿಸಬಯಸುತ್ತೇನೆ.

ಉಪಸಭಾಧ್ಯಕ್ಷರು.—ಶ್ರೀ ಕೆ. ವಸಂತ ವಿ. ಸಾಲಿಯಾನ : ಗೈರುಹಾಜರಿ.

iv) ಮಂಲ್ಪೆ ಸಮುದ್ರ ತೀರವನ್ನು ಪ್ರವಾಸಿ ಕೇಂದ್ರವನ್ನಾಗಿ ಮಾಡುವುದು.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯ ಮಲ್ಪೆ ಸಮುದ್ರ ತೀರವು ನಮ್ಮ ರಾಜ್ಯದ ಅತ್ಯಂತ ಸುಂದರ ತಾಣಗಳಲ್ಲಿ ಒಂದಾಗಿದ್ದು, ಅಲ್ಲಿ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದವರು ಒಂದು ಸಮುದ್ರ ತೀರ ಪ್ರವಾಸೋದ್ಯಮ ಯೋಜನೆಯ ನಿರ್ಮಾಣವನ್ನು ಕೈಗೆತ್ತಿಕೊಂಡು ಅದು ಈಗೆ ಪೂರ್ಣಗೊಳ್ಳುವ ಹಂತದಲ್ಲಿದೆ. ಈ ಸಂಬಂಧದಲ್ಲಿ ಸದರಿ ನಿಗಮದ ಜನರಲ್ ಮ್ಯಾನೇಜರ್ 'ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆಯಲ್ಲಿ ಒಂದು ಜಾಹೀರಾತನ್ನು ನೀಡಿದ್ದಾರೆ. ಆ ಜಾಹೀರಾತು ಆಂಗ್ಲ ಭಾಷೆಯಲ್ಲಿ ಈ ಕೆಳಕಂಡಂತಿದೆ.

KARNATAKA STATE TOURISM DEVELOPMENT CORPORATION LIMITED.

Beach resort project at Malpe is available on long lease, outright sale.

A Beach Resort Project nearing completion, at Malpe, is available on long lease/outright sale. The facility consists of 45 double rooms, dining hall, bar conference hall, swimming pool besides others.

Further details and the offer forms could be obtained from the office of the General Manager (finance) KSTDC, 10/4, Kasturba Road, Bangalore-560 001, on payment of prescribed fee of rupees one hundred only (non - refundable) The Corporation reserves the right to reject any or all offers without assigning any reasons whatsoever.

Sealed offers shall be forwarded to the Managing Director, KSTDC, on or before 5-2-1986.

M. S. SIDDARAJ
General Manager (F)
Company Secretary.

ಮೇಲ್ಕಂಡ ಜಾಹೀರಾತಿನಲ್ಲಿ ನಿಗದಿಪಡಿಸಿರುವ ಪ್ರಕಾರ ಮಲ್ಪೆಯಲ್ಲಿ ನಿರ್ಮಾಣವಾಗಿರುವ ಪ್ರವಾಸಿ ಧಾಮವನ್ನು ಬಾಡಿಗೆಗೆ ಕೊಡಲು ಅಥವಾ ದೀರ್ಘಾವಧಿ ಗುತ್ತಿಗೆಗೆ ಕೊಡಲು ನಿರ್ಧರಿಸಿರುವುದಾಗಿ ತಿಳಿದು ಬರುತ್ತದೆ ಸದರಿ ಪ್ರವಾಸಿ ಧಾಮವು ಅತ್ಯಂತ ಲಾಭಕರವಾದ ಯೋಜನೆಯಾಗಿದ್ದು ಅದನ್ನು ಪ್ರವಾಸೋದ್ಯಮ ನಿಗಮವೇ ನಿರ್ವಹಿಸುವುದು ಸೂಕ್ತವೇ ಹೊರತು, ಅದನ್ನು ಬಾಡಿಗೆ ಮಾಡುವ ಅಥವಾ ದೀರ್ಘಾವಧಿ ಗುತ್ತಿಗೆಗೆ ನೀಡುವ ಆಲೋಚನೆಯು ಅಸಮಂಜಸ ಹಾಗೂ ಅನುಚಿತವಾದುದೂ ಅಲ್ಲದೆ ಈ ಒಂದು ಮೇಲ್ಕಂಡ ಜಾಹೀರಾತನ್ನು ಪ್ರಕಟಿಸಿರುವ ಪ್ರವಾಸೋದ್ಯಮ ನಿಗಮದ ಜನರಲ್ ಮ್ಯಾನೇಜರ್ ಹಾಗೂ ಕಂಪನಿ ಕಾರ್ಯದರ್ಶಿಗಳಾದ ಶ್ರೀ ಎಂ. ಎಸ್. ಸಿದ್ದರಾಜ್‌ರವರೇ ಇದನ್ನು ಕೊಂಡುಕೊಳ್ಳುವ ಅಥವಾ ದೀರ್ಘಾವಧಿ ಗುತ್ತಿಗೆಗೆ ಪಡೆದುಕೊಳ್ಳುವ ಹೊಂಚು ಹಾಕಿದ್ದಾರೆ ಎಂದು ನನಗೆ ನಂಬಲರ್ಹವಾದ ವರದಿಗಳು ಬಂದಿವೆ. ಹಾಗಾದಪಕ್ಷದಲ್ಲಿ ಇದು ಇನ್ಸೈಡಿಯ ಟ್ರೇಡಿಂಗ್ ಹಗರಣವಾಗುವ ಅಪಾಯವು ಅತ್ಯಂತ ಸ್ಪಷ್ಟವಾಗಿದೆ. ಜಾಹೀರಾತನ್ನು ೨೬-೧-೧೯೮೬ನೇ ತಾರೀಖಿನಂದು ಪ್ರಕಟಿಸಿ, ಈ ಬಗ್ಗೆ ಅರ್ಜಿ ಸಲ್ಲಿಸಲು ದಿನಾಂಕ ೫-೨-೧೯೮೬ ಕೊನೆಯ ದಿನಾಂಕ ಆಗಿರುತ್ತದೆ. ಕೊಟ್ಟಿರುವ ಅಲ್ಪ ಸಮಯಾವಕಾಶ ಯಾರೋ ಗೊತ್ತಿದ್ದವರಿಗೆ ಬೇಕಾದವರಿಗೆ ಅನುಕೂಲ ಮಾಡಿಕೊಡುವ ದುರುದ್ದೇಶ ಇರಬಹುದೆಂಬ ಅನುಮಾನವನ್ನು ಬಲಪಡಿಸುತ್ತದೆ ಆದ್ದರಿಂದ ಸರಕಾರ ಈ ವಿಚಾರದಲ್ಲಿ ತಕ್ಷಣ ಗಮನ ಹರಿಸಿ ಸಂಬಂಧಪಟ್ಟ ಎಲ್ಲ ಕಡತಗಳನ್ನು ಸರಕಾರಕ್ಕೆ ತರಿಸಿಕೊಂಡು ಪ್ರವಾಸೋದ್ಯಮ ನಿಗಮವೇ ಸದರಿ ಪ್ರವಾಸ ಧಾಮದ ಬಡತನವನ್ನು ಉಳಿಸಿಕೊಂಡು ಸ್ವತಹ ಅದನ್ನು ನಿರ್ವಹಿಸುವಂತೆ ಆಜ್ಞೆ ಮಾಡಬೇಕಾಗಿ ಅನುಗ್ರಹಪೂರ್ವಕವಾಗಿ ಒತ್ತಾಯಿಸುತ್ತೇನೆ.

ಶ್ರೀ ಜೀವರಾಜ ಆಳ್ವ.—ಮಾನ್ಯ ಅಧ್ಯಕ್ಷರೇ, ಮಲ್ಪೆಯು ಪ್ರವಾಸೋದ್ಯಮದ ಕೇಂದ್ರದ ಬಗ್ಗೆ ಈ ಜಾಹೀರಾತು ಬಂದಿರುವುದು ನಿಜ. ಆದರೆ ಜಾಹೀರಾತಿನ ಕೊನೆಯ ದಿನವನ್ನು ಒಂದು ವಾರಗಳ ಕಾಲ ಪುನಃ ಎಕ್ಸ್‌ಟೆಂಡ್ ಮಾಡಲಾಗಿದೆ. ಮಾನ್ಯ ಸದಸ್ಯರು ಬಯಸಿದಲ್ಲಿ ಅದನ್ನು ಒಂದು ತಿಂಗಳು ಬೇಕಾದರೂ ಎಕ್ಸ್‌ಟೆಂಡ್ ಮಾಡೋಣ. ನಿಜವಾದ ಕಾರಣ ಏನು ಎಂದು ಹೇಳಿದರೆ ಮೊನ್ನೆ ನಡೆದಂಥ ಮಂತ್ರಿಮಂಡಲದ ಕೇಂದ್ರ ಪ್ರವಾಸೋದ್ಯಮದ ಸಭೆಯಲ್ಲಿ ಪ್ರಧಾನಮಂತ್ರಿಗಳು ಒಂದು ಮಾತನ್ನು ಹೇಳಿದರು. ೫ ಸ್ಟಾರ್ ಕಲ್ಚರ್, ೩ ಸ್ಟಾರ್ ಕಲ್ಚರ್ ಬೇಡ. ಡೊಮೆಸ್ಟಿಕ್ ಟೂರಿಸಂ ಬಗ್ಗೆ ಹೆಚ್ಚಿನ ಅವಕಾಶ ಕೊಡಿ ಎಂದು ಹೇಳಿದ್ದಾರೆ, ಕೇಂದ್ರದ ಬಗ್ಗೆ ಏನಾದರೂ ಹೇಳಿದರೆ ಹಿಂದಿನ ಸರ್ಕಾರ ಮಾಡಿದಂಥ ತೀರ್ಮಾನಗಳ ಬಗ್ಗೆ ಟೀಕೆ ಮಾಡುತ್ತಿದ್ದಾರೆಂದು ಮಾನ್ಯ ಸದಸ್ಯರು ಖಂಡಿತಾ ತಿಳಿದು ಕೊಳ್ಳಬಾರದು. ಬಹಳ ಆಲೋಚನೆ ಮಾಡಿ ಕಳೆದ ಈ ಸಭೆಯಲ್ಲಿ ಪ್ರವಾಸೋದ್ಯಮ ನಿಗಮವು ಇದರ ತೀರ್ಮಾನವನ್ನು ತೆಗೆದುಕೊಳ್ಳಲಿದೆ. ಇದುವರೆಗೂ ಖರ್ಚು ಮಾಡಿದಂಥ ಹಣ ೫೮ ಲಕ್ಷ ರೂಪಾಯಿಗಳು ಇನ್ನೂ ಪೆಂಡಿಂಗ್ ಬಿಲ್ಸ್ ಸುಮಾರು ೧೦ ಲಕ್ಷ ರೂಪಾಯಿ ಖರ್ಚು ಮಾಡಿದ್ದೇವೆ. ಇದು ಪೂರ್ಣವಾಗಿ ನಿರ್ಮಾಣಗೊಳ್ಳಬೇಕಾದರೆ ಇದಕ್ಕೆ ಸಂಬಂಧಿಸಿದಂತೆ ಸುಮಾರು ಒಂದು ಕೋಟಿ ಹನ್ನೆರಡು ಲಕ್ಷ ರೂಪಾಯಿಗಳು ಆಗುತ್ತದೆ. ಒಟ್ಟಿಗೆ ಒಂದು ಕೋಟಿ ಐವತ್ತು ಲಕ್ಷ ಇದ್ದರೆ ೫೯ ಕೊಠಡಿಗಳ ಒಂದು ಪ್ರವಾಸೊದ್ಯಮ ಕೇಂದ್ರವನ್ನು ತಯಾರು ಮಾಡತಕ್ಕಂತಹ ಅವಕಾಶ ಅಲ್ಲಿ ಇದೆ. ಈಗ ೫೦ ಕೊಠಡಿಗಳಿಂದ ಕೂಡಿದ ಒಂದು ಪ್ರವಾಸಿಗರ ಕೇಂದ್ರವನ್ನು ತಯಾರು ಮಾಡುವ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಅಲ್ಲಿ ಇಂತಹ ಒಂದು ಪ್ರವಾಸಿ ಕೇಂದ್ರ ನಿರ್ಮಾಣವಾದರೆ, ಮಲ್ಪೆ ಅಂಥ ಸ್ಥಳದಲ್ಲಿ ಎಷ್ಟು ಪ್ರವಾಸಿಗಳು ಸಿಗಬಹುದು ಎಂಬ ಪ್ರಶ್ನೆ ನಮ್ಮ ಮುಂದೆ ಇದೆ. ಇದನ್ನು Un planned and un imagi-ativo plan ಎಂದು ಹೇಳುತ್ತೇವೆ. ಈ ನಿಗಮವು ಕನ್‌ಟ್ರೋನಿಂಗ್ ಬಾಡಿ, ಇದು ಪೂರ್ಣ ಜವಾಬ್ದಾರಿಯನ್ನು ವಹಿಸಿಕೊಂಡು ಕೆಲಸ ಮಾಡಬೇಕಾಗುತ್ತದೆ. ಮಾನ್ಯ ಸದಸ್ಯರಿಗೆ ಈ ಆಹ್ವಾನವನ್ನು ಕೊಡುತ್ತಾ ಇದ್ದೇವೆ, ಅವರು ಬೇಕಾದರೆ ತೆಗೆದುಕೊಳ್ಳಬಹುದು. ಈಗಾಗಲೇ ೮೦ ಲಕ್ಷ ಖರ್ಚು ಮಾಡಿದ್ದೇವೆ. ನೀವು ೮೦ ಲಕ್ಷ ಕೊಟ್ಟು ತೆಗೆದುಕೊಂಡರೆ ನಿಮಗೆ ಕೊಡುತ್ತೇವೆ. ಈ ವರ್ಷದಲ್ಲಿ ಕರ್ನಾಟಕ ಪ್ರವಾಸೋದ್ಯಮ ಹಣಕಾಸಿನ ಪರಿಸ್ಥಿತಿಯಂ ಸಂಧಾರಿಸಿದೆ. ೧೬ ಲಕ್ಷ ರೂಪಾಯಿಯ ನಿವ್ವಳ ಲಾಭವನ್ನು ಈ ಸಾರಿ ನಿಗಮಂದವರು ಗಳಿಸಿದ್ದಾರೆ. ನಮ್ಮ ಪ್ರಧಾನ ಮಂತ್ರಿಗಳು ತಿಳಿಸಿದ ರೀತಿಯಲ್ಲಿ ಅಂದರೆ ಡೊಮ್ಯಾಸ್ಟಿಕ್ ಟೂರಿಸಂ ಕಡೆಯಲ್ಲಿಯಾಗಿರತಕ್ಕ ವಿಚಾರದಲ್ಲಿ ನಾವು ಕ್ರಮ ತೆಗೆದು ಕೊಳ್ಳಬೇಕಾಗಿದೆ. ಹೆಚ್ಚು ಪ್ರವಾಸಿಗರನ್ನು ಆಕರ್ಷಿಸಿ ಹೆಚ್ಚು ಅವಕಾಶವನ್ನು ಮಾಡಿಕೊಡುವುದು ನಮ್ಮ ಕರ್ತವ್ಯವಾಗಿದೆ. ಪ್ರವಾಸಿಗರಿಗೆ ಕ್ಲೀನ್ ಓಪನ್ ಏರಿಯಾ, ಬೇಸಿಕ್ ಸ್ಯಾನಿಟರಿ ಸೌಲಭ್ಯವನ್ನು ಕೊಡಬೇಕಾಗಿದೆ. ಇದರಿಂದ ೮೦ ಲಕ್ಷ ಬಂದರೆ ನಾವು ೪೦ ಕೇಂದ್ರಗಳಲ್ಲಿ ಚಿಕ್ಕ ಚಿಕ್ಕ ತಾಣಗಳನ್ನು ಅಭಿವೃದ್ಧಿ ಮಾಡುವುದಕ್ಕೆ ಅವಕಾಶ ಆಗುತ್ತದೆ. ಮಾನ್ಯ ಸದಸ್ಯರು ಅಪೇಕ್ಷೆ ಪಟ್ಟರೆ ಇದರ ದಿನಾಂಕವನ್ನು ಸ್ವಲ್ಪ ಮುಂದಕ್ಕೆ ಹಾಕುತ್ತೇವೆ. It is open for all. The highest bidder will get it. The highest bidder, whoever wants it on a long lease will get it. ನಿಮಗಕ್ಕೆ ಲಾಭವಾಗುವ ರೀತಿಯಲ್ಲಿ ಯಾರು ಬಂದರೂ ಅವರಿಗೆ ನಾವು ಇದನ್ನು ಕೊಡಲು ತಯಾರಿದ್ದೇವೆ. ಶ್ರೀನಿವಾಸ್‌ರವರೇ ಬರಲಿ, ಅವರ ಮಿತ್ರರೇ ಬರಲಿ ನಾವು ಕೊಡಲು ಸಿದ್ಧರಿದ್ದೇವೆ.

5. ರಾಜ್ಯದ ಪ್ರಾಥಮಿಕ ಶಿಕ್ಷಕರು ತಮ್ಮ ಬೇಡಿಕೆಗಳನ್ನು ಈಡೇರಿಸಲು ಅನ್ನ ಸತ್ಯಾಗ್ರಹ ಮಾಡಿರುವುದು.

ಶ್ರೀ ಬಿ. ಸ್ವಾಮಿರಾವ್.—ಈ ದಿನ ಅಂದರೆ ದಿನಾಂಕ ೧೦-೨-೧೯೮೬ ರಂದು ರಾಜ್ಯದ ಪ್ರಾಥಮಿಕ ಶಿಕ್ಷಕರ ಸಮಸ್ಯೆಗಳ ಪರಿಹಾರಕ್ಕಾಗಿ ರಾಜ್ಯದಾದ್ಯಂತ ಪ್ರಾಥಮಿಕ ಶಿಕ್ಷಕರು ವಿಧಾನ ಸೌಧದ ಮುಂದೆ ಸಾವಿರಾರು ಸಂಖ್ಯೆಯಲ್ಲಿ ಆಗಮಿಸಿ ಅನ್ನ ಸತ್ಯಾಗ್ರಹ ಮಾಡಿ ತಮ್ಮ ಬೇಡಿಕೆಗಳನ್ನು ಪೂರೈಸುವಂತೆ ಸರ್ಕಾರದವರನ್ನು ಒತ್ತಾಯಿಸುತ್ತಿರುವ ಬಗ್ಗೆ ಗಂಭೀರವಾಪಕ್ಕೆ ಒಳಗಾಗಿರುವ ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೇನೆ.

ಶ್ರೀ ವೀರಣ್ಣ.—ಇವರ ಬಗ್ಗೆ ಸಂಬಂಧಪಟ್ಟ ಸಚಿವರು ನಾಳೆ ಹೇಳಿಕೆಯನ್ನು ಕೊಡುತ್ತಾರೆ.